ಶ್ರೀ ಬಿ.ಎಸ್. ಯಡಿಯೂರಪ್ಪ: ತಾವು ಸದನವನ್ನು ಮನಸ್ಸಿಗೆ ಬಂದ ಹಾಗೆ ನಡೆಸುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾವು ಅವಕಾಶ ಕೊಡುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ದೇಶಪಾಂಡೆಯವರು ಕಡತದಿಂದ ತೆಗೆದು ಹಾಕಲು ನಿಮ್ಮನ್ನು ಯಾರು ಕೇಳಿದರು ಅಂತ ಕೇಳಿದರು. ಮಾನ್ಯ ಸಚಿವರಾದ ಸಗೀರ್ ಅಹ್ಮದ್ರವರು ಕೇಳಿದರು.....

(ಗೊಂದಲ)

(ಈ ಹಂತದಲ್ಲಿ ಬಿ.ಜೆ.ಪಿ. ಶಾಸಕರು ಸಭಾತ್ಯಾಗ ಮಾಡಿದರು)

(ಗೊಂದಲ)

(ಈ ಹಂತದಲ್ಲಿ ಜನತಾ ದಳದ ಕೆಲವು ಶಾಸಕರು ಮತ್ತು ಇತರರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ನಾನು ಈ ಹಿಂದೆ ಈ ಸಭೆಯ ಅಧ್ಯಕ್ಷನಾಗಿದ್ದ ಅಪರಾಧಕ್ಕಾಗಿಯೇ ನನಗೆ ತಿಳಿದ ಎರಡು ಮಾತು ಹೇಳಬೇಕು ಎಂದು ಬಹಳ ಹೊತ್ತಿನಿಂದ ಪ್ರಯತ್ನ ಮಾಡುತ್ತಿದ್ದೇನೆ. ಯಾರೂ ಅದಕ್ಕೆ ಅವಕಾಶ ಕೊಡುವ ಹಾಗೆ ಕಾಣಲಿಲ್ಲ. ನನ್ನ ಪ್ರಶ್ನೆ ಇಷ್ಟೆ, ನಿಯಮಗಳ ವ್ಯಾಪ್ತಿಯಲ್ಲಿ ಕಡತದಿಂದ ಪದಗಳನ್ನು ತೆಗೆಯುವುದಕ್ಕೆ ನಾವೇ ರೂಪಿಸಿಕೊಂಡಿದ್ದ ನಿಯಮಗಳಿವೆ. ನಿಮ್ಮ ಮನಸ್ಸಿಗೆ ಏನಾದರೂ ಅನ್ಪಾರ್ಲಿಮೆಂಟರಿ ಎಂದು ಕಂಡರೆ ಅದನ್ನು ತೆಗೆಯತಕ್ಕಂತಹ ಅಧಿಕಾರ ತಮಗಿದೆ. ಬೇರೆ ಸದಸ್ಯರಿಗೆ ಅದರಿಂದ ನೋವಾಗಿದ್ದರೆ ಅವರಿಂದ ನಮಗೆ ನೋವಾಗಿದೆ ಎಂದು ಕೇಳಿದಾಗ ಅದನ್ನು ಪರಿಶೀಲನೆ ಮಾಡಿ ತೆಗೆಯತಕ್ಕಂಥದ್ದು ಇದೆ. ಒಮ್ಮೆ ಪದವನ್ನು ಪ್ರಯೋಗ ಮಾಡುವಾಗ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಒಮ್ಮೆ ನಾವು ಪದಪ್ರಯೋಗ ಮಾಡಿದರೆ.....

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಅಯ್ಯೋ ವೆಂಕಟೇಶ್ ಅವರೇ, ನಿಮ್ಮಿಂದ ನಾನು ಪಾಠ ಕಲಿಯಬೇಕಾಗಿಲ್ಲ ಕುಳಿತುಕೊಳ್ಳಿ. ನೀವು ಇಲ್ಲಿನ ಜಾಗದಿಂದ ಹಿಂದಕ್ಕೆ ಏಕೆ ಹೋದಿರಿ ಎಂದು ಗೊತ್ತಿದೆ, ಕುಳಿತುಕೊಳ್ಳಿ. ನಿಮ್ಮಿಂದ ಪಾಠ ಕಲಿಯಬೇಕಾಗಿಲ್ಲ. ನಾನು ಏನು ಕೇಳುತ್ತಿದ್ದೇನೆ, ಇಂತಹ ವಿಚಾರಗಳಲ್ಲಿ ಸದನವನ್ನು ನಡೆಸತಕ್ಕಂತಹ ಜವಾಬ್ದಾರಿ ತಮಗೆ ಎಷ್ಟು ಇದೆಯೋ ಅದಕ್ಕಿಂತ ಒಂದು ತೂಕ ಹೆಚ್ಚು ಈ ಸದನದ ನಾಯಕರಿಗಿದೆ. ನಾಯಕರು ಸಂಯಮವನ್ನು ಕಳೆದುಕೊಂಡರೆ ಸಭೆಯನ್ನು ನಿಯಂತ್ರಣಕ್ಕೆ ತರುವವರು ಯಾರು? ಆದ್ದರಿಂದ ಅವರು ಹೇಳಿದ್ದರಲ್ಲಿ ಸರಿ ತಪ್ಪುಗಳ ವ್ಯಾಖ್ಯಾನ ಮಾಡುವುದಕ್ಕೆ ಮುಂಚೆ ಅವರು ಕುಪಿತರಾದುದರಿಂದ ಎರಡು ಮಾತನ್ನು ಹೆಚ್ಚು ಹೇಳಿದರೂ ಸಹ ನನ್ನ ದೃಷ್ಟಿಯಲ್ಲಿ ಯಾವ ಅನ್ಪಾರ್ಲಿಮೆಂಟರಿ ವಾಕ್ಯವನ್ನೂ ಅವರು ಹೇಳಲಿಲ್ಲ. ಅದಕ್ಕಾಗಿ ಅವರೂ ಕೋಪಗೊಂಡರು, ಆ ಕೋಪದ ಜೊತೆಗೆ ಏನಾದರೂ ಸರಿಪಡಿಸೋಣ ಎಂದರೆ ತಾವೂ ಕಡತದಿಂದ ತೆಗೆದುಹಾಕ್ತೀನಿ ಅಂದು ಬಿಟ್ಟರೆ ಮತ್ತೆ ಸದನವನ್ನು ನಡೆಸುವುದು ಹ್ಯಾಗೆ? ನನ್ನ ಸಲಹೆ ಇಷ್ಟೆ, ನಡೆದ ಘಟನೆಗಳು, ವಾತಾವರಣ ತೀರ ಕಹಿಯಾಗಿದೆ. ಇದುವರೆಗೂ ನಡೆದುಕೊಂಡು ಬಂದಿರಿ, ಅದಕ್ಕಾಗಿ ನಾನು ಹೇಳಿದೆ, ಎಂದೂ ಸಂಯಮವನ್ನು ಕಳೆದುಕೊಳ್ಳುವ